೧–೩೦ ಪಿ.ಎಂ.

ಸಮಗ್ರ ನೀರು ಸರಬರಾಜು ಕೇಂದ್ರ, ಭದ್ರಾ ಕಾಲುವೆಯಿಂದ ಪೂರೈಕೆಯಾಗುತ್ತಿದೆ. ಅಂದರೆ ಒಂದು ದಿನಕ್ಕೆ ಒಳ ಲಕ್ಷ ಗ್ಯಾಲನ್ ನೀರನ್ನು ದಿನನಿತ್ಯ ಅಲ್ಲಿಂದ ಪೂರೈಸಲಾಗುತ್ತಿದೆ. ನಗರಕ್ಕೆ ಬೇಕಾದ ಮುಕ್ಕಾಲು ಭಾಗ ನೀರು ಭದ್ರಾ ಕಾಲುವೆಯಿಂದ ಪೂರೈಕೆಯಾಗುತ್ತಿದೆ. ಕಾರಣ ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆಯಾಗುವ ನೀರು ನವೆಂಬರ್ ೧೯೮೭ ರಿಂದ ಜೂನ್ ೧೯೮೮ರವರೆಗೆ (ಮುಂದಿನ ವರ್ಷ ಮಳೆ ಬಂದು ಜಲಾಶಯ ತುಂಬುವವರೆಗೆ) ನಿಲ್ಲಿಸಲಾಗುವುದೆಂದು ಅಧ್ಯಕ್ಷರು ತಿಳಿಸಿರುವ ಪ್ರಕಾರ ಆ ದಿನಗಳಲ್ಲಿ ಮೂರು ಲಕ್ಷ ಜನ ಸಂಖ್ಯೆಯುಳ್ಳ ಬೃಹತ್ ನಗರ ದಾವಣಗೆರೆಯಲ್ಲಿ ನೀರಿನ ಅಭಾವ ಉಂಟಾಗುವುದರೊಂದಿಗೆ ಅನೇಕ ಸಾಂಕ್ರಾಮಿಕ ರೋಗಗಳು ಹರಡುವ ಸಂಭವವಿದೆ. ಆದ್ದರಿಂದ ಈ ಎಲ್ಲಾ ಪರಿಸ್ಥಿತಿಯನ್ನೂ ಸರಿದೂಗಿಸಬೇಕಾದರೆ ಕನಿಷ್ಟಪಕ್ಷ ' ನೂರು ಕೊಳವೆ ಬಾವಿ' ಗಳನ್ನಾದರೂ ಈ ಮೂರು ತಿಂಗಳೊಳಗಾಗಿ ಕೊರೆಯಿಸಿ ಸಾರ್ವಜನಿಕರಿಗೆ ನೀರು ಪೂರೈಕೆ ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಆ ಕ್ಷೇತ್ರದ ಪ್ರತಿನಿಧಿಯಾಗಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕ ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತಿಳಿಸುತ್ತೇನೆ.

ಶ್ರೀ ಪಂಪಾಪತಿ.—ಏನು ಸ್ವಾಮಿ, ಪ್ರತಿಯೊಂದು ವಿಚಾರಕ್ಕೂ ಮಾನ್ಯ ರಘುಪತಿಯವರೇ ಉತ್ತರ ಹೇಳುತ್ತಾರೆ.....

ಅಧ್ಯಕ್ಷರು.—ಮಾನ್ಯ ರಘುಪತಿಯವರೆ, ಇದೂ ಕೂಡ ಸೀರಿಯಸ್ ಮ್ಯಾಟರ್. ಸಂಬಂಧಪಟ್ಟ ಮಂತ್ರಿಗಳಿಗೆ ತೀವ್ರ ಕ್ರಮ ತೆಗೆದುಕೊಳ್ಳುವಂತೆ ಹೇಳಿ. ನಾನೂ ಕೂಡ ಹೇಳುತ್ತೇನೆ.

4, ಬೆಳ್ತಂಗಡಿ ತಾಲ್ಲೂಕಿನ ಉಜಿರೆ ಗ್ರಾಮದ ಪದ್ಮಲತಾ ಕೊಲೆಯ ತನಿಖೆಯ ಬಗ್ಗೆ

ಶ್ರೀ ಕೆ. ಬಸಂತ ಬಂಗೇರ.—ಮಾನ್ಯ ಅಧ್ಯಕ್ಷರೇ ಈ ಕೆಳಕಂಡ ವಿಷಯದ ಬಗ್ಗೆ ನಿಯಮಾವಳಿ ೩೩ರ ಪ್ರಕಾರ ಸದನದಲ್ಲಿ ಪ್ರಸ್ತಾಪಿಸಲು ಅನುಮತಿ ಕೋರುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಧರ್ಮಸ್ಥಳ ಗ್ರಾಮದ ಉಜಿರೆ ಎಸ್. ಡಿ. ಎಂ ಕಾಲೇಜ್ ವಿದ್ಯಾರ್ಥಿನಿ ಕು. ಪದ್ಮಲತಾಳ ಕೊಲೆಯ ತನಿಖೆಯನ್ನು ಬೆಳ್ತಂಗಡಿ ಪೋಲೀಸರು ಸರಿಯಾಗಿ ನಡೆಸದಿದ್ದುದರಿಂದ ಸಿ.ಓ.ಡಿ.ಗೆ ಒಪ್ಪಿಸಲಾಯಿತಂ.ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ಜಗನ್ನಾಥರೈ ಗಳವರ ನೇತೃತ್ವದಲ್ಲಿ ತನಿಖೆ ಪ್ರಾರಂಭವಾಗಿ ಕೊನೆಯ ಹಂತಕ್ಕೆ ಮುಟ್ಟುವ ಸಂದರ್ಭ ಅವರನ್ನು ವಾಪಸು ಕರೆಸಲಾಯಿತು. ಸಿ.ಐ. ಜಗನ್ನಾಥರೈಗಳನ್ನು ವಾಪಸು ಕರೆಸಲು ಕಾರಣವೇನು ? ಅದೇ ಸಂದರ್ಭ ನಾನು ಮಾನ್ಯ ಸಚಿವರಿಗೆ ಸಿ.ಐ. ಶ್ರೀ ಜಗನ್ನಾಥರೈಗಳನ್ನು ವಾಪಸು ಕರೆಸುವ ವಿಚಾರದಲ್ಲಿ ಮೊಕ್ತ ಹಾಗೂ ಸುಮಾರು ಐದು ಪತ್ರಗಳನ್ನು ಬರೆದು ತಿಳಿಸಿ ಆ ತನಿಖೆ ಪರಿಪೂರ್ಣ ಆಗುವ ತನಕ ಶ್ರೀ ಜಗನ್ನಾಥರೈಗಳೇ ತನಿಖೆಯ ಉಸ್ತುವಾರಿ ಹೊಂದಿರಬೇಕೆಂದು ತಿಳಿಸಿದ್ದೆ. ಆದರೆ ಅಂದಿನಿಂದ ಇಂದಿನತನಕ ಅವರನ್ನು ತನಿಖೆಗೆ ನೇಮಕ ಮಾಡಿಲ್ಲ. ಆದರ ಬದಲಾಗಿ ಅವರನ್ನು ತಕ್ಷಣ ರಜೆಯಲ್ಲಿ ಮನೆಗೆ ಹೋಗುವಂತೆ ಆದೇಶ ನೀಡಲಾಯಿತೆಂದು ತಿಳಿದೆ. ಈ ವಿಚಾರ ನೋಡುವಾಗ ಸತ್ಯಾಂಶವನ್ನು ಮುಚ್ಚಿಡಲು ಈ ಪ್ರಯತ್ನ ನಡೆದಿದೆ ಎಂದು ಸ್ಪಷ್ಟವಾಗುತ್ತದೆ. ಅಲ್ಲದೆ ಅದರ ನಂತರ ಬೇರೆ ಸಿ.ಓ.ಡಿ. ಅಧಿಕಾರಿಗಳನ್ನು ತನಿಖೆಗೆ ಕಳುಹಿಸಿಕೊಟ್ಟು ತನಿಖೆ ಮಾಡಿಸಿತು. ಪದ್ಮಲತಾಳ ಕೊಲೆ ಬಗ್ಗೆ ಯಾವುದೇ ರೀತಿಯ ಸುಳುವು ದೊರೆಯಲಿಲ್ಲವೆಂದು ತನಿಖೆಯನ್ನು ಮುಕ್ತಾಯ ಗೊಳಿಸಿರುತ್ತಾರೆ. ತನಿಖೆಯು ನಡೆಯುತ್ತಿರುವ ಸಂದರ್ಭದಲ್ಲಿ ಸಿ.ಐ. ಜಗನ್ನಾಥರೈಗಳನ್ನು ವಾಪಸು ಕರೆಸಿ ರಜೆಯಲ್ಲಿ ಹೋಗುವಂತೆ ಹೇಳಲು ಕಾರಣವೇನು ? ಅವರನ್ನು ಪುನರ್ ನೇಮಕ ಮಾಡಿ ತನಿಖೆ ಮಾಡಿ ಸಬೇಕೆಂದು ಅನೇಕ ತಿಂಗಳುಗಳಿಂದ ಒತ್ತಾಯಿಸಿದರೂ ಪುನರ್‌ನೇಮಕ ಮಾಡದಿರಲು ಕಾರಣವೇನು ? ಅವರನ್ನು ಪುನರ್‌ನೇಮಕ ಮಾಡಿ ತನಿಖೆ ಮಾಡಿಸಿ ಕೊಲೆಗಡುಕರನ್ನು ಪತ್ತೆ ಹಚ್ಚಲು ಅವಕಾಶ ಮಾಡಿಕೊಡ ಬೇಕಾಗಿ ಈ ಮೂಲಕ ವಿನಂತಿಸುತ್ತೇನೆ.

ಮಾನ್ಯ ಅಧ್ಯಕ್ಷರೇ ಒಬ್ಬ ಹೆಣ್ಣಿನ ಪ್ರಾಣದ ಪ್ರಶ್ನೆ. ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು. ಸಂಬಂಧಪಟ್ಟ ಮಾನ್ಯ ಸಚಿವರು ಇಲ್ಲದಕಾರಣ ನಾಳೆ ನನಗೆ ಉತ್ತರವನ್ನು ಕೊಡಿಸಬೇಕು. ನಾನು ಇದರ ಬಗ್ಗೆ ಗಮನಸೆಳೆಯುವ ಸೂಚನೆಯನ್ನೂ ಸಹ ಕೊಟ್ಟಿರುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಗಮನಸೆಳೆಯುವ ಸೂಚನೆಗೆ ಅವಕಾಶ ಕಲ್ಪಿಸಲು ಸಂಬಂಧಪಟ್ಟ ಸಚಿವರಿಗೆ ತಿಳಿಸುತ್ತೇನೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್.—ಸನ್ಮಾನ್ಯ ಅಧ್ಯಕ್ಷರೇ ಆಫಜಲಪುರ ಕ್ಷೇತ್ರದಲ್ಲಿ ಅನೇಕ ಗ್ರಾಮಗಳಿಗೆ ನೀರುಸರಬರಾಜು ಮಾಡುತ್ತಿದ್ದು, ಅಲ್ಲಿಯ ಲಾರಿ ಮತ್ತು ಟ್ರಾಕ್ಟರ್ ಮಾಲೀಕರಿಗೆ ಸರ್ಕಾರದಿಂದ ೩,೪೦,೦೦೦ ರೂ. ಬರಬೇಕಾದ ಹಣ ಇನ್ನೂ ವರೆಗೆ ಬಂದಿಲ್ಲಾ. ಮೊದಲೇ ಬರಗಾಲದ ದವಡೆಯಲ್ಲಿ ನಮ್ಮ ಕ್ಷೇತ್ರ ಸಿಲುಕಿರುವಾಗ ತಾವು ಎರಡು ಮೂರು ತಿಂಗಳಿಂದ ನೀರು ಸರಬರಾಜು ಮಾಡಿದ ವಾಹನಗಳ ಬಾಡಿಗೆ ನೀಡದೆ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ವಾಹನ ಮಾಲೀಕರು ಮುಂದೆ ಬರಲು ಹೆದರುತ್ತಿದ್ದಾರೆ. ಆದಷ್ಟು ಬೇಗ ಜಿಲ್ಲಾ ಪರಿಷತ್ತಿಗೆ ಇದರ ಹಣ ಬಿಡುಗಡೆ ಮಾಡಿ ಅಥವಾ ಬೇಗನೆ ಕೊಡಿಸುವ ಮನಸ್ಸು ಮಾಡಬೇಕಾಗಿ ಈ ಮೂಲಕ ತಿಳಿಯಪಡಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ನನ್ನ ಗಮನಕ್ಕೆ ಈ ವಿಚಾರ ಬಂದ ಕೂಡಲೇ ಹಣವನ್ನು ಬಿಡುಗಡೆ ಮಾಡಿಸಿದ್ದೇನೆ. ಇನ್ನೊಂದುವಾರದಲ್ಲಿಯೇ ಅವರಿಗೆ ಹಣವನ್ನು ಕೊಡಿಸಲು ಪ್ರಯತ್ನ ಮಾಡುತ್ತೇನೆ.

೫. ಬಳ್ಳಾರಿ ಜಿಲ್ಲಾ ಪರಿಷತ್ ಅಧ್ಯಕ್ಷರು ಸ್ಥಳೀಯ ಶಾಸಕರನ್ನು ನಿರ್ಲಕ್ಷಿಸಿ ಕಾರ್ಯಕ್ರಮಗಳನ್ನು ನಡೆಸಂತ್ತಿರುವುದರ ಬಗ್ಗೆ

ಶ್ರೀ ಬಿ. ಹೆಚ್. ಯಲಕಾನಾಯಕ್.—ಮಾನ್ಯ ಅಧ್ಯಕ್ಷರೇ ಬಳ್ಳಾರಿ ಜಿಲ್ಲಾ ಪರಿಷತ್ ಅಧ್ಯಕ್ಷರು ನಮ್ಮ ತಾಲ್ಲೂಕಿಗೆ ಬಂದಾಗ ಆ ತಾಲೂಕಿನ ಶಾಸಕನಾದ ನನಗೆ ಯಾವ ಪ್ರವಾಸದ ಕಾರ್ಯಕ್ರಮವನ್ನು ಕಳುಹಿಸುವುದಿಲ್ಲ, ತಮ್ಮಷ್ಟಕ್ಕೆ ತಾವೇ ಕ್ಷೇತ್ರದಲ್ಲಿ ಪ್ರವಾಸ ಮಾಡುವರು ಹೀಗಾಗಿ ಜಿಲ್ಲಾ ಪರಿಷತ್ ಅಧ್ಯಕ್ಷರಿಗೂ ತಾಲೂಕಿನ ಶಾಸಕರಿಗೂ ಯಾವ ಸಂಬಂಧವೂ ಇಲ್ಲವೆ ? ನನ್ನ ತಾಲ್ಲೂಕಿನಲ್ಲಿ ಕೆಲವು ಕಾರ್ಯಕ್ರಮಗಳನ್ನು ನನ್ನನ್ನು ಬಿಟ್ಟೇ ಮಾಡಿರುತ್ತಾರೆ. ತಾ : ೨೯-೮-೧೯೮೭ ರಂದು ಕಂಚಿಕೇರಿ ಮಂಡಲ ವಡ್ಡರಹಳ್ಳಿಯಲ್ಲಿ (ಸ್ಪಿಚ್ ಆನ್ ಸೆರವಂನಿ) ಗುಂಡಿ ಒತ್ತುವ ಕಾರ್ಯಕ್ರಮ ನನಗೆ ತಿಳಿಯದೆ ನೆರವೇರಿಸಿರುತ್ತಾರೆ. ಇದು ತಪ್ಪಲ್ಲವೇ ? ಮುಂದೆ ಹೀಗಾಗದಂತೆ ಸರಕಾರದವರು ಕ್ರಮ ಕೈಕೊಂಡು ಜಿಲ್ಲಾಪರಿಷತ್ ಅಧ್ಯಕ್ಷರುಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡುವರೇ ? ಇದರ ಬಗ್ಗೆ ಸರಕಾರ ದಿಂದ ಹೇಳಿಕೆ ನೀಡಬೇಕೆಂದು ಒತ್ತಾಯಿಸುತ್ತೇನೆ.

ಇದೇ ತಾಲ್ಲೂಕಿನ ಚಿಗಟೇರಿ ಗ್ರಾಮದಲ್ಲಿ ೫-೮-೧೯೮೭ ರಂದು ಜಿಲ್ಲಾ ಕೈಗಾರಿಕಾ ಕೇಂದ್ರದವರಿಂದ ಪಸತಿ ಕಾರ್ಯಗಳ ಉದ್ಘಾಟನೆ ಮತ್ತು ಅಂದೇ ಭೂಸೇನಾ ನಿಗಮದವರಿಂದ ಗುಂಪು ಮನೆಗಳ ಉದ್ಘಾಟನೆ ಕಾರ್ಯಕ್ರಮ ನನ್ನನ್ನು ಬಿಟ್ಟೇ ಮಾಡಿರುತ್ತಾರೆ. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಮುಂದೆ ಹೀಗಾಗದಂತೆ ಸರಿಪಡಿಸುವಿರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗೆ ಶಾಸಕರಿಗೆ ಸಂಬಂಧಪಟ್ಟಂತೆ ಈಗಾಗಲೇ ಒಂದು ಸುತ್ತೋಲೆಯನ್ನು ಕಳುಹಿಸಿದ್ದೇವೆ. ಸರ್ಕಾರಿ ಕಾರ್ಯಕ್ರಮಗಳು ಯಾವುದೇ ನಡೆಯಲಿ, ಎಲ್ಲೇ ನಡೆಯಲಿ ಶಾಸಕರನ್ನು ಜಿಲ್ಲಾಪರಿಷತ್ ಅಧ್ಯಕ್ಷರು ಆಹ್ವಾನಿಸಿ ಸದಸ್ಯರು ಪಾಲುಗೊಳ್ಳುವಂತೆ ಮಾಡಬೇಕು ಎನ್ನುವ ಸಲಹೆಯನ್ನು ಕೊಟ್ಟಿದ್ದೇವೆ. ಈಗ ಮಾನ್ಯ ಸದಸ್ಯರು ನನ್ನಗಮನಕ್ಕೆ ಈ ವಿಚಾರವನ್ನು ತಂದಿದ್ದಾರೆ. ಜಿಲ್ಲಾಪರಿಷತ್ ಅಧ್ಯಕ್ಷರಿಗೆ ಸೂಕ್ತ ಸಲಹೆ ಕೊಡುತ್ತೇನೆ.

ಅಧ್ಯಕ್ಷರು.—ಕಿರಿಕಿರಲ್ಲಿ ಮತ್ತೆ ಕೇಳುವುದಕ್ಕೆ ಅವಕಾಶ ಇಲ್ಲ. ಬೆಳಗೆಲ್ಲಾ ರಾಮಾಯಣ ಕೇಳಿ ರಾವಣನಿಗೂ ಸೀತೆಗೂ ಏನಾಯಿತು ಅಂದಹಾಗೆ ಆಯಿತು. ದಯವಿಟ್ಟು ಕುಳಿತುಕೊಳ್ಳಿ.